ಗುರಿ ನಿಮ್ಮ ಕೈಗೆ ಎಟುಕುವಂತಿರಬೇಕು. ಅದು ಅತೀ ಕಷ್ಟವೂ ಆಗಿರಬಾರದು ಅಥವಾ ಅತೀ ಸುಲಭವಾಗಿ ಸಿಕ್ಕುವಂತದ್ದೂ ಆಗಿರಬಾರದು. ಅತೀ ಸುಲಭವಾದಲ್ಲಿ ನಿಧಾನವಾಗಿ ಅದರಲ್ಲಿ ಆಸಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ.

★ ಪದ್ಮಾವತಿರಾವ್

# ಗುರಿ, ಸಾಧನೆ ಮತ್ತು ಯಶಸ್ಸು

ನಾಲ್ವರು ಮಕ್ಕಳು ಟಿ.ವಿ.ಯ ಮುಂದೆ ತದೇಕಚಿತ್ತರಾಗಿ ಕುಳಿತು ಕ್ರಿಕೆಟ್ ನೋಡುತ್ತಿದ್ದಾರೆ. ನಮ್ಮ ಭಾರತದ ಆಟಗಾರರು ಒಂದೊಂದೇ ರನ್ ಪೇರಿಸುತ್ತಿದ್ದಂತೆ, ಎದುರಾಳಿಯ ಒಂದೊಂದೇ ವಿಕೆಟ್ ಪತನವಾಗುತ್ತಿದ್ದಂತೆ ಮಕ್ಕಳ ಉತ್ಸಾಹ ಹೇಳತೀರದು. ಆಗ ಅವರ ಮನಸ್ಸಿನಲ್ಲಿ ಮೂಡುವ ಆಶೆ 'ನಾನು ಕೂಡಾ ಸಚಿನ್, ಕುಂಬ್ಳೆ ಅಥವಾ ದೋನಿಯಂತೆ ಆಗಬೇಕು'. ಹಾಗೆಯೇ ಯಶಸ್ವಿ ಸಂಗೀತಗಾರ, ಕಲಾಕಾರ, ಡಾಕ್ಟರ್, ಲಾಯರ್, ಎಂಜಿನಿಯರ್‌ರನ್ನು ನೋಡಿದಾಗ ತಾನೂ ಅವರಂತೆ ಆಗಬೇಕೆಂಬ ಆಸೆ. ಆದರೆ ಈ ಆಸೆ ಕ್ಷಣಿಕವಾದದ್ದು. ಆದುದರಿಂದ ನಾವು ಮೊದಲಿಗೆ ನಮ್ಮ ಆಸೆ ನಿಜಕ್ಕೂ ಯಾವ ಕಡೆಗಿದೆ, ನಮ್ಮ ಅಭಿರುಚಿ ಏನು ಎಂದು ಗುರುತಿಸಿಕೊಳ್ಳಬೇಕು. ಆನಂತರ ಅದನ್ನು ಪಡೆಯಲು ಸಾಧನೆ ಮಾಡಬೇಕು.

ಸಾಮಾನ್ಯವಾಗಿ ನಾವು ಕೇಳುವ ಮಾತೆಂದರೆ, ಯಶಸ್ಸನ್ನು ಗಳಿಸಬೇಕಾದರೆ ಅದೃಷ್ಟ ಬೇಕು. 'ಯಶಸ್ಸಿನ ಉತ್ತುಂಗದಲ್ಲಿರುವವರೆಲ್ಲರೂ ಅದೃಷ್ಟವಂತರು. ನಮಗೆಲ್ಲಿದೆ ಅಂತಹ ಅದೃಷ್ಟ' ಎಂದು ಕಾಣದ ಅದೃಷ್ಟದ ಕೈಯನ್ನು ದೂಷಿಸಿ, ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವವರೇ ಹೆಚ್ಚು ಮಂದಿ.

ಯಶಸ್ಸು ಯಾರಿಗೂ ಸುಮ್ಮನೆ ಬರುವುದಿಲ್ಲ. ಅದಕ್ಕೆ ಬೇಕಾದದ್ದು ಛಲ ಮತ್ತು ಪರಿಶ್ರಮವೇ ಹೊರತು ಅದೃಷ್ಟವಲ್ಲ. ಯಶಸ್ಸಿನಲ್ಲಿ ಅದೃಷ್ಟದ ಪಾಲು ಶೇಕಡಾ 10; ಆದರೆ ಪರಿಶ್ರಮ ಮತ್ತು ಸಾಧನೆ ಮಾಡಲೇಬೇಕೆಂಬ ಛಲದ ಪಾಲು ಶೇಕಡಾ 90. ಯಶಸ್ಸನ್ನು ಗಳಿಸಲು ಪ್ರಯತ್ನ ಬೇಕು. ಪ್ರಯತ್ನವಿದ್ದಲ್ಲಿ ಪ್ರತಿಫಲವಿದೆ. ಕಷ್ಟಪಟ್ಟರೆ ಫಲ ಉಂಟು ಎನ್ನುವುದು ನೂರಕ್ಕೆ ನೂರು ಸತ್ಯ. ಅವಕಾಶಗಳು ನಮ್ಮನ್ನು ಹುಡುಕಿಕೊಂಡು ಬರುವುದಿಲ್ಲ. ಅದನ್ನು ನಾವೇ ಹುಡುಕಿಕೊಂಡು ಹೋಗಬೇಕು.

ಪ್ರೌಢಶಾಲೆಗೆ ಬರುವ ವೇಳೆಗೆ ಮಕ್ಕಳಿಗೆ ತಮ್ಮ ಆಸಕ್ತಿ ಯಾವ ಕ್ಷೇತ್ರದ ಕಡೆಗಿದೆ ಎಂದು ಅರ್ಥವಾಗುತ್ತದೆ. ತಾನು ಏನು ಓದಬೇಕು ಅಥವಾ ಯಾವ ಕ್ಷೇತ್ರವನ್ನು ಆರಿಸಿಕೊಳ್ಳಬೇಕು ಅನ್ನುವುದನ್ನು ತನ್ನ ಅಭಿರುಚಿಗೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಬೇಕು. ತನ್ನ ತಂದೆ ತಾಯಿಯ ಆಸೆಗೆ ಅಥವಾ ಸ್ನೇಹಿತರ ಒತ್ತಡಕ್ಕೆ ಮಣಿಯದೆ ತಮಗೆ ತಾವೇ ನಿರ್ಧರಿಸಿಕೊಳ್ಳಬೇಕು. ಇದು ಯಶಸ್ಸಿಗೆ ಮೊದಲನೆಯ ಮೆಟ್ಟಿಲು.

ಹಣ ಗಳಿಕೆಯೊಂದೇ ನಿಮ್ಮ ಗುರಿಯಾಗಬಾರದು. ಎಂಜಿನಿಯರ್ ಅಥವಾ ಡಾಕ್ಟರ್ ಆದರೆ ಹೆಚ್ಚಿನ ಹಣ ಸಂಪಾದಿಸಬಹುದು ಅನ್ನುವ ಕಾರಣಕ್ಕೆ ನೀವು ಆ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಡಿ. ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಿ ಯಶಸ್ಸನ್ನು ಪಡೆದರೆ ಹಣ ತಂತಾನೆ ಬರುತ್ತದೆ. ಹಣವೊಂದೇ ಜೀವನದಲ್ಲಿ ಎಲ್ಲವೂ ಅಲ್ಲ ಅನ್ನುವುದು ನೆನಪಿರಲಿ.

ವಿದ್ಯಾಭ್ಯಾಸ ಮುಗಿದ ನಂತರ ಯಾವ ಉದ್ಯೋಗ ತೆಗೆದುಕೊಳ್ಳಬೇಕು ಎಂದು ಯೋಚಿಸುವುದು ಅಗತ್ಯ. ನಿಮ್ಮ ಗೆಳೆಯರೆಲ್ಲಾ ವಿದೇಶಕ್ಕೆ ಕೆಲಸ ಅರಸಿ ಹೋಗುತ್ತಿದ್ದಾರೆ ಎಂದು ನೀವೂ ಅವರನ್ನು ಹಿಂಬಾಲಿಸಬೇಕಿಲ್ಲ. ಅಲ್ಲಿನ ಅವಕಾಶ ನಿಮ್ಮ ಬೌದ್ಧಿಕ ಬೆಳವಣಿಗೆಗೆ ಅಥವಾ ನೀವು ಆಯ್ದುಕೊಂಡ ಕ್ಷೇತ್ರದಲ್ಲಿ ಹೆಚ್ಚಿನದೇನನ್ನಾದರೂ ಸಾಧಿಸಲು ಸಹಕಾರಿಯಾದಲ್ಲಿ ಹೋದರೆ ತಪ್ಪಿಲ್ಲ. ಹಣದ ಬೆನ್ನು ಹತ್ತಿ ನಿಮಗೆ ಇಷ್ಟವಿಲ್ಲದ ಕೆಲಸ ಅಥವಾ ಇಷ್ಟವಿಲ್ಲದ ಜಾಗದಲ್ಲಿ ಮುಂದುವರಿದಾಗ ಜೀವನದಲ್ಲಿ ಬೇಸರ ಮತ್ತು ನಿರಾಶೆಯಾಗಬಹುದು. ಇದು ನಿಮ್ಮ ಯಶಸ್ಸಿನ ಎರಡನೆಯ ಮೆಟ್ಟಿಲು.

'ಗುರಿ' ನಿಮ್ಮ ಕೈಗೆ ಎಟುಕುವಂತಿರಬೇಕು. ಅದು ಅತೀ ಕಷ್ಟವೂ ಆಗಿರಬಾರದು ಅಥವಾ ಅತೀ ಸುಲಭವಾಗಿ ಸಿಕ್ಕುವಂತದ್ದೂ ಆಗಿರಬಾರದು. ಅತೀ ಸುಲಭವಾದಲ್ಲಿ ನಿಧಾನವಾಗಿ ಅದರಲ್ಲಿ ಆಸಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ. ಯಾವುದೇ ಕೆಲಸದಲ್ಲಿ ಸ್ವಲ್ಪ ಮಟ್ಟಿನ ಚಾಲೆಂಜ್ ಇರಬೇಕು. ಅದು ಅತಿ ಕಷ್ಟವಾದಲ್ಲಿ ಅದನ್ನು ಸಾಧಿಸಲು ಆಗದೆ ಅದನ್ನು ಅರ್ಧಕ್ಕೆ ಕೈ ಬಿಡಬೇಕಾಗಬಹುದು. ಗುರಿ ಯಾವಾಗಲೂ ಕಷ್ಟಪಟ್ಟರೆ ಕೈಗೆಟುಕುವಂತಿರಬೇಕು.

'ಗುರಿ' ಸ್ಪಷ್ಟವಾದ ಮೇಲೆ ಅದನ್ನು ಸಾಧಿಸುವ ಬಗ್ಗೆ ಯೋಚಿಸಬೇಕು. 'ಗುರಿ' ನಿಶ್ಚಯವಾದ ಮೇಲೆ 'ಯಶಸ್ಸು' ಅನ್ನುವ ಸೌಧ ಮುಟ್ಟಲು 'ಸಾಧನೆ' ಅನ್ನುವ ಏಣಿಯನ್ನು ಉಪಯೋಗಿಸಿಕೊಂಡು, ಹಂತ ಹಂತವಾಗಿ ಒಂದೊಂದೇ ಮೆಟ್ಟಿಲನ್ನು ನಿಧಾನವಾಗಿ, ಅಚಲವಾಗಿ ಏರುತ್ತಾ ಹೋಗಬೇಕು. ಯಶಸ್ಸಿನ ಉತ್ತುಂಗಕ್ಕೇರಲು ಸಾಧನೆಯ ಏಣಿಯನ್ನು ಅತೀ ವೇಗವಾಗಿ ಹತ್ತಲು ಹೋದರೆ ಕಾಲುಜಾರಿ ಕೆಳಗೆ ಬೀಳಬಹುದು. ಅತೀ ನಿಧಾನದಲ್ಲಿ ನಿಂತಲ್ಲೆ ನಿಂತು ತೂಕಡಿಸಿ ಕೆಳಗೆ ಬೀಳಬಹುದು. ಆದುದರಿಂದ ತಾಳ್ಮೆಯಿಂದ, ನಿಧಾನವಾಗಿ, ಹಂತ ಹಂತವಾಗಿ ಮೇಲೆ ಹೋಗಲು ಪ್ರಯತ್ನಿಸಿ. ಇದು ನಿಮ್ಮ ಯಶಸ್ಸಿಗೆ ಮೂರನೆಯ ಮೆಟ್ಟಿಲು.

ಸಾಧನೆಯ ಮಾರ್ಗ 'ರಾಜ ಮಾರ್ಗ'ವಾಗಿರಬೇಕು. ಅದು ಎಂದಿಗೂ 'ಕಳ್ಳ ಮಾರ್ಗ' ಆಗಿರಬಾರದು. ಉದಾಹರಣೆಗೆ ಒಬ್ಬ ವಿದ್ಯಾರ್ಥಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಬೇಕೆಂಬ ಆಸೆಯಲ್ಲಿ, ಪರೀಕ್ಷೆಯಲ್ಲಿ ಕಾಪಿ ಮಾಡುವುದು, ಪ್ರಶ್ನೆ ಪತ್ರಿಕೆಯನ್ನು ಹಣ ಕೊಟ್ಟು ಕೊಂಡುಕೊಳ್ಳುವುದು, ಮೌಲ್ಯಮಾಪಕರಿಗೆ ಹಣದ ಆಮಿಷ ಒಡ್ಡಿ ಹೆಚ್ಚಿನ ಅಂಕಗಳನ್ನು ಪಡೆಯುವುದು ಸರಿಯಲ್ಲ. ಇಂಥಹ 'ಅಡ್ಡದಾರಿಗಳು' ಅಥವಾ 'ಶಾರ್ಟ್‌ಕಟ್'ಗಳು ತಾತ್ಕಾಲಿಕ ಫಲ ಕೊಡಬಹುದೇ ಹೊರತು ಅದು ಶಾಶ್ವತವಾದುದ್ದಲ್ಲ.

ಇನ್ನೊಂದು ಮುಖ್ಯವಾದ ಅಂಶ ಅಂದರೆ ಸಾಧನೆಯ ಹಾದಿ ತಿಳಿದುಕೊಂಡಷ್ಟು ಸುಗುಮವಾಗಿರುವುದಿಲ್ಲ. ಅದೊಂದು ಹೂ ತುಂಬಿದ ದಾರಿ ಎಂದು ತಿಳಿದುಕೊಂಡು ಮುಂದೆ ಹೋದಲ್ಲಿ, ಮಧ್ಯದಲ್ಲಿ ಏನಾದರೂ ಎಡರು ತೊಡರು ಬಂದರೆ ನಾವು ನಿರಾಶರಾಗಿ ಮುಂದೆ ಹೋಗದೆ ಇರಬಹುದು. ಆದುದರಿಂದ ಹಾದಿಯಲ್ಲಿ ಕಲ್ಲು ಮುಳ್ಳುಗಳಿರಬಹುದೆಂದು ಮಾನಸಿಕವಾಗಿ ತಯಾರಾಗಿದ್ದರೆ, ಯಾವುದೇ ಕಷ್ಟನಷ್ಟಗಳನ್ನು ಧೈರ್ಯವಾಗಿ ಎದುರಿಸಿ ಮುಂದೆ ಸಾಗಬಹುದು ಮತ್ತು ಯಶಸ್ಸನ್ನು ನಮ್ಮದಾಗಿಸಿಕೊಳ್ಳಬಹುದು.

'ಮನಸ್ಸಿದ್ದಲ್ಲಿ ಮಾರ್ಗವಿದೆ', ಆದುದರಿಂದ ನಿಮ್ಮ ಗುರಿಯನ್ನು ತಲುಪಿ, ಯಶಸ್ಸನ್ನು ಗಳಿಸಬೇಕಾದರೆ 'ಆತ್ಮ ವಿಶ್ವಾಸದಿಂದ' ಸಾಧನೆ ಮಾಡಿ.

ನಿಮ್ಮ 'ಗುರಿ' ಸ್ಪಷ್ಟವಾಗಿರಲಿ, 'ಸಾಧನೆ' ನಿರಂತರವಾಗಿ ನಡೆಯಲಿ, ನಿಮ್ಮ ಕೆಲಸದಲ್ಲಿ ಶ್ರದ್ಧೆ ಇರಲಿ, ಇದೆಲ್ಲಾ ಇದ್ದಲ್ಲಿ 'ಯಶಸ್ಸು' ನಿಮ್ಮದಾಗುವುದು ಖಂಡಿತ.



ಗ್ರಾಫಿಕ್ಸ್ : ಶಿಲ್ಪಾ ಕಬ್ಬಿಣಕಂತಿ